ಮಂಗಳಸೂತ್ರವಿತ್ತು. ಇಬ್ಬರೂ ನನ್ನ ಸ್ವಾಗತಕ್ಕಾಗಿ ನಿಂತಿದ್ದಾರೆ ಎಂದು ಅನ್ನಿಸಿತು. ನಾನು ಮತ್ತೊಂದು ವಿಷಯವನ್ನು ಗಮನಿಸಿದೆ; ಹೊರ ನೋಟಕ್ಕೆ ಇಬ್ಬರೂ ಶೃಂಗರಿಸಿಕೊಂಡಿದ್ದರು, ಆದರೆ ಅವರ ಕಾಲುಗಳಲ್ಲಿ ಚಪ್ಪಲಿಗಳಿರಲಿಲ್ಲ. ಮನೆಯೊಳಗೆ ಬರಿಗಾಲಿನಲ್ಲಿರುವುದು ಬಹುಶಃ ಇವರ ಸಂಸ್ಕೃತಿಯಿರಬೇಕು.

ನೀನಾ ನನ್ನನ್ನು ಔಪಚಾರಿಕವಾಗಿ ತನ್ನ ತಂದೆ–ತಾಯಿಗೆ ಪರಿಚಯಿಸಿದಳು. ನಾನು ಕೈಜೋಡಿಸಿ ಆದರದಿಂದ ಅವರನ್ನು ಅಭಿನಂದಿಸಿದೆ. ಇಬ್ಬರೂ ತುಂಬಾ ಕಾತರದಿಂದ ನನ್ನನ್ನು ಕಾಯುತ್ತಿದ್ದರು. ಅವರು ತುಂಬು ಉತ್ಸಾಹದಿಂದ ನನ್ನನ್ನು ಸ್ವಾಗತಿಸಿದರು. ನೀನಾಳ ತಾಯಿ ನನ್ನನ್ನೇ ಗಮನಿಸುತ್ತಿದ್ದರು. ಅವರು ಸಂತಸದಿಂದ ನನ್ನನ್ನು ನೋಡುತ್ತಿದ್ದರು. ಅವರು ನನ್ನನ್ನು ಇಷ್ಟಪಡುತ್ತಿದ್ದಾರೆಂದು ಅನ್ನಿಸಿತು. ನನಗೆ ನೆಮ್ಮದಿಯೆನಿಸಿತು. ಪ್ರೇಯಸಿಯ ತಾಯಿಯೇ ಇಷ್ಟಪಟ್ಟಾಗ ಸಾಕಷ್ಟು ವಿಘ್ನಗಳು ದೂರವಾದವು.

ನನ್ನೆದೆಯ ಬಡಿತ ಕಡಿಮೆಯಾಯಿತು. ನೀನಾಳ ತಾಯಿ ಪದೇ ಪದೇ ಕಣ್ಮರೆಯಾಗುತ್ತಿದ್ದರು. ಅವರು ಅಡುಗೆ ಮನೆಯಲ್ಲಿ ಬಹುಶಃ ಏನೋ ತಯಾರಿಸುತ್ತಿದ್ದರು. ಇಂಡಿಯನ್ ಸ್ನ್ಯಾಕ್ಸ್ ಮತ್ತು ಹಸಿಮೆಣಸಿನಕಾಯಿಯ ವಾಸನೆ ಮೂಗಿಗೆ ಬಡಿಯುತ್ತಿತ್ತು. ವಾಹ್!

ನೀನಾಳ ತಾಯಿ ಅಡುಗೆ ಮನೆಯಿಂದ ತಮ್ಮ ಒದ್ದೆಯಾದ ಕೈಗಳನ್ನು ಒರೆಸುತ್ತಾ ನನ್ನೆದುರಿಗೆ ಬಂದು ಭಾವುಕರಾಗಿ ಹೇಳಿದರು, 'ನೀನಾಳಿಗೆ ಒಬ್ಬ ಸಿಕ್ಕಿದ್ದು ನಮಗೆ ತುಂಬಾ ಸಂತೋಷವಾಯಿತು. ಪಾಪ, ನೀನಾ ತುಂಬಾ ದಿನಗಳಿಂದ ಒಂಟಿಯಾಗಿದ್ದಳು...'

ನಾನೂ ತುಂಬಾ ದಿನಗಳಿಂದ ಒಂಟಿಯಾಗಿದ್ದೆ. ಒಂಟಿಯಾಗಿರುವವರು ಕ್ರಮೇಣ ತಮ್ಮ ಏಕಾಂಗಿತನಕ್ಕೆ ಒಗ್ಗಿಕೊಳ್ಳುತ್ತಾರೆಂದು ಹೇಳಲಾಗುತ್ತದೆ. ಆದರೆ ಇದು ನನಗೆ ಸಾಧ್ಯವಾಗಲಿಲ್ಲ, ನಾನು ಒಂಟಿತನದಿಂದ ದಣಿದಿದ್ದೆ. ನಾನು ನೀನಾಳನ್ನು ಪಡೆದು ತುಂಬಾ ಖುಷಿಗೊಂಡಿದ್ದೆ. ನೃತ್ಯವನ್ನು ಪ್ರದರ್ಶಿಸುವಾಗ ಅವಳು ತನ್ನ ಕುರ್ಚಿಯಿಂದ ಹಾರಿ ನನ್ನೆಡೆಗೆ ಬಂದಿದ್ದಳು, ಆಗ ನನಗೆ ದೇವರೇ ಇವಳನ್ನು ನನ್ನ ಬಳಿಗೆ ಕಳುಹಿಸಿದ್ದಾನೆಂದು ಅನ್ನಿಸಿತ್ತು.

ಒಟ್ಟಿನಲ್ಲಿ ನೀನಾಳ ತಂದೆ–ತಾಯಿಯನ್ನು ಭೇಟಿಯಾಗಿದ್ದು ಹಿತವೆನಿಸಿತು. ಅವರು ಶಿಷ್ಟ ಮತ್ತು ಸುಸಂಸ್ಕೃತರಾಗಿದ್ದರು. ಅವರ ಜೀವನ ವಿಧಾನ ಸರಳವಾಗಿದ್ದು, ವಾತ್ಸಲ್ಯಮಯವಾಗಿತ್ತು. ಆದರೆ ಇಂಥ ಪರಂಪರಾಗತ ತಂದೆ–ತಾಯಿಯ ಮಗಳು ಇಷ್ಟು ಆಧುನಿಕ ಹೆಣ್ಣು ಹೇಗಾದಳು! ನನಗೆ ಆಶ್ಚರ್ಯವಾಗುತ್ತಿತ್ತು.

'ನಿಮ್ಮ ಮುತ್ತಜ್ಜಿ ಇಂಡಿಯನ್ ಆಗಿದ್ದರೆಂದು ನೀನಾ ಹೇಳುತ್ತಿದ್ದಳು.'

'ವಾಸ್ತವವಾಗಿ ನನ್ನ ಗ್ರೇಟ್ ಗ್ರೇಟ್ ಗ್ರ್ಯಾಂಡ್ ಮದರ್ ಇಂಡಿಯನ್ ಆಗಿದ್ದರು.'

'ಓಹೋ... ನಿಮ್ಮ ಮುತ್ತಜ್ಜನೊಂದಿಗೆ ಅವರ ಭೇಟಿ ಹೇಗಾಯಿತು? ಸ್ಕಾಟ್ಲೆಂಡ್ ಎಲ್ಲಿ, ಇಂಡಿಯಾ ಎಲ್ಲಿ?... ಅದೂ ಆ ಕಾಲದಲ್ಲಿ...' ಶೀಲಾ ದೇವಿಯವರು ಉತ್ಸುಕತೆಯಿಂದ ಕೇಳಿದರು.

'ಹೌದು' ನಾನು ಉಸಿರೆಳೆದುಕೊಂಡು ಹೇಳಿದೆ. 'ನನ್ನ ಗ್ರೇಟ್ ಗ್ರೇಟ್ ಗ್ರ್ಯಾಂಡ್ ಫಾದರ್ ಶಿಪ್ ಕ್ಯಾಪ್ಟನ್ ಆಗಿದ್ದರು. ಅವರು ಇಂಡಿಯಾಕ್ಕೆ ಚಹಾ ಪುಡಿ ತರಲು ಹೋಗುತ್ತಿದ್ದರು. ಅಲ್ಲಿಂದ ತಮಗೊಂದು ಹುಡುಗಿಯನ್ನೂ ತಂದರು...' ಎಂದು ನಕ್ಕೆ. ನೀನಾ ಸಹ ಕಿಲಕಿಲನೆ ನಕ್ಕಳು. ಅವಳ ತಂದೆ–ತಾಯಿ ಮಾತ್ರ ಮುಗುಳ್ನಕ್ಕರು.

'ಆದರೂ ನಾನು ಅಷ್ಟು ಇಂಡಿಯನ್ ಹಾಗೆ ಅನ್ನಿಸಲ್ಲ, ಆದರೆ ನನ್ನ ಸಹೋದರಿ ಇಂಡಿಯನ್ ಹಾಗೆ ಕಾಣಿಸುತ್ತಾಳೆ. ಅವಳ ಬಣ್ಣ ಉರಿ ಬಿಸಿಲಿನಿಂದಾಗಿ ನಿಮ್ಮ ಹಾಗೆಯೇ ಇದೆ' ನಾನು ಶೀಲಾ ದೇವಿಯವರನ್ನು ನೋಡುತ್ತಾ ಹೇಳಿದೆ, 'ನನ್ನ ಇಬ್ಬರು ಅವಳಿ ಮಕ್ಕಳಲ್ಲಿ ಒಬ್ಬಳು ಯೂರೋಪಿಯನ್ ಹಾಗಿದ್ದಾಳೆ, ಇನ್ನೊಬ್ಬಳು ಇಂಡಿಯನ್ ಹಾಗೆ ಕಪ್ಪು ತಲೆಗೂದಲು ಮತ್ತು ಗೋಧಿ ಬಣ್ಣವನ್ನು ಹೊಂದಿದ್ದಾಳೆ. ನನ್ನ ಅನೇಕ ಸ್ನೇಹಿತರು ನನ್ನ ಹಿಂದಿನ ಹೆಂಡತಿಯನ್ನು, ನೀವು ಒಟ್ಟಿಗೆ ಇಬ್ಬರೊಂದಿಗೆ ಮಲಗುತ್ತಿದ್ದಿಲ್ಲ ತಾನೇ ಎಂದು ತಮಾಷೆಯನ್ನು ಸಹ ಮಾಡಿದರು'.

ನೀನಾ ನಕ್ಕಳು, ಆದರೆ ಅವಳ ತಂದೆ–ತಾಯಿ ಮೌನ ವಹಿಸಿದರು. ಅವರ ಮುಖದ ಭಾವನೆಯನ್ನು ಗಮನಿಸಿದಾಗ, ಅವರೊಂದಿಗೆ ನಾನು ಇಂಥ ತಮಾಷೆ ಮಾಡಬಾರದು, ಅವರು ಗಂಭೀರ ವ್ಯಕ್ತಿಗಳು ಎಂದು ನನಗೆ ಅನ್ನಿಸಿತು.

'ಅಂದ್ರೆ ನೀನು ಶುದ್ಧ ಸ್ಕಾಟಿಶ್ ವ್ಯಕ್ತಿಯಲ್ಲ. ನಿನ್ನ ಸ್ಕಾಟಿಶ್ ರಕ್ತ ತುಂಬಾ ಹಿಂದೆಯೇ ಬೆರೆತುಹೋಗಿದೆ' ಡಾ. ರಾಮಚಂದ್ರ ಇದ್ದಕ್ಕಿದ್ದಂತೆ ನಕ್ಕರು.

'ನನ್ನ ಧಮನಿಗಳಲ್ಲಿ ರಾಜರ ರಕ್ತ ಹರಿತಿದೆ; ನನ್ನ ಮುತ್ತಜ್ಜಿ ರಾಜಕುಮಾರಿಯಾಗಿದ್ದಳು' ನಾನು ಹೆಮ್ಮೆಯಿಂದ ಹೇಳಿದೆ.

ಶ್ರೀನಿವಾಸನ್ ಪರಿವಾರ ನನ್ನನ್ನು ಅಪನಂಬಿಕೆಯ ದೃಷ್ಟಿಯಿಂದ ನೋಡಿತು.

'ನಾನು ನನ್ನನ್ನು ಹೊಗಳಿಕೊಳ್ಳುತ್ತಿಲ್ಲ. ನನ್ನ ಮುತ್ತಜ್ಜಿ ಖಂಡಿತವಾಗಿ ಉನ್ನತ ವರ್ಗದ, ರಾಜಮನೆತನಕ್ಕೆ ಸೇರಿದವಳಾಗಿದ್ದರು' ನಾನು ಹೆಮ್ಮೆಯಿಂದ ಶ್ರೀನಿವಾಸನ್ ಪರಿವಾರಕ್ಕೆ ಹೇಳಿದೆ.

'ಬ್ರಿಟಿಷ್ ಶಾಸನ ನಮ್ಮ ದೇಶವನ್ನಷ್ಟೇ ಆಳಲಿಲ್ಲ, ನಮ್ಮ ರಾಜಕುಮಾರಿಯರನ್ನು ಸಹ ಅಪಹರಿಸಿತು' ರಾಮಚಂದ್ರ ಶ್ರೀನಿವಾಸನ್ ಅವರು ಅಕಸ್ಮಾತ್ ಅರ್ಧ ಇಂಗ್ಲಿಷ್ ಮತ್ತು ಇನ್ನರ್ಧ ತಮ್ಮ ಮಾತೃಭಾಷೆಯಲ್ಲಿ ಹೇಳಿದರು. ನನಗೆ ಅವರ ಮಾತು ಪೂರ್ಣವಾಗಿ ಅರ್ಥವಾಗಲಿಲ್ಲ. ಆದರೆ ನೀನಾ ಮತ್ತು ಶೀಲಾ ದೇವಿ ಇಬ್ಬರೂ ಅವರಿಗೆ ಗದರಿಸಿದ್ದನ್ನು ಗಮನಿಸಿದೆ.

'ಅಪ್ಪಾ' ನೀನಾ ಸಿಟ್ಟಿನಿಂದ ತನ್ನ ತಂದೆಯ ಮಾತನ್ನು ತಡೆದಳು.

'ಏನ್ ತಲೆಬುಡವಿಲ್ಲದ ಮಾತಾಡ್ತೀರ? ಪಾಲ್‌ರೊಂದಿಗೆ ಇಂಥ ಮಾತನಾಡುವ ಔಚಿತ್ಯವಾದರೂ ಏನಿದೆ?' ಶೀಲಾ ದೇವಿ ಸಹ ತಮ್ಮ ಪತಿಯ ಬಗ್ಗೆ ರೇಗಿದರು.

ನಾನು ಏನೂ ತೋಚದೆ ಅವರನ್ನೆಲ್ಲಾ ನೋಡುತ್ತಿದ್ದೆ, ಆಗಲೇ ರಾಮಚಂದ್ರ ಶ್ರೀನಿವಾಸನ್ ನನಗೆ ವ್ಯಂಗ್ಯದಿಂದ ಹೇಳಿದರು, 'ಹಾಗಾದ್ರೆ ನಿಮ್ಮ ಧಮನಿಗಳಲ್ಲಿ ರಾಜಸ–ರಕ್ತ ಹರಿತಿದೆ, ಮಿಸ್ಟರ್!'

'ಹೌದು' ನಾನು ಸಂತೋಷದಿಂದ ಹೇಳಿದೆ, 'ನಮ್ಮ ಫ್ಯಾಮಿಲಿಯ ಬೇರು ಎಲ್ಲಿಯವರೆಗೆ ಹೋಗುವುದೆಂದು ನನ್ನ ಸೋದರತ್ತೆ ರಿಸರ್ಚ್ ಮಾಡಿದರು. ಮುತ್ತಜ್ಜಿ ಮರಾಠಾ ಸಮುದಾಯಕ್ಕೆ ಸೇರಿದವರಾಗಿದ್ದು, ಮರಾಠಾ ರಾಜಮನೆತನದವರಾಗಿದ್ದರು; ಅವರು ಮುಂಬೈಯವರಾಗಿದ್ದರು. ಅವರ ಹೆಸರು ರಾಜಕುಮಾರಿ ವಿದ್ಯಾ ಪಾಟೀಲ್ ಎಂದಾಗಿತ್ತು. ಎಲ್ಗಿನ್‌ನಲ್ಲಿರುವ ಒಂದು ಚರ್ಚ್‌ನಲ್ಲಿ ಅವರ ವಿವಾಹದ ರೆಕಾರ್ಡ್ ಸಹ ಲಭ್ಯವಿದೆ ಎಂಬುದನ್ನು ಅವರು ಪತ್ತೆ ಹಚ್ಚಿದರು.'

'ತುಂಬಾ ಒಳ್ಳೇದು!' ಡಾ. ಶ್ರೀನಿವಾಸನ್ ಹೇಳಿದರು.

'ಒಂದು ವೇಳೆ ನೀವು ನಿಮ್ಮ ಇತಿಹಾಸವನ್ನು ತಿಳಿದಿದ್ದರೆ ಭವಿಷ್ಯದೆಡೆಗೆ ಮುಂದುವರೆಯಲು ಅನುಕೂಲವಾಗುತ್ತದೆ' ನಾನು ಅರ್ಥಪೂರ್ಣವಾಗಿ ನೀನಾಳನ್ನು ನೋಡುತ್ತಾ ಹೇಳಿದೆ. ಅವಳು ಮುಗುಳ್ನಗುತ್ತಿದ್ದಳು.

'ಜಂಟಲಮೆನ್! ನೀವು ಸರಿಯಾಗಿ ಹೇಳಿದಿರಿ. ನಿಮ್ಮ ಪರಿವಾರದ ಇತಿಹಾಸದಲ್ಲಿ ನಮ್ಮ ಹಿಂದೂಸ್ತಾನ ಕಲೆತಿದೆ' ಎನ್ನುತ್ತಾ ಇದ್ದಕ್ಕಿದ್ದಂತೆ ರಾಮಚಂದ್ರರು ಎದ್ದು, ಕೋಣೆಯ ಒಂದು ಮೂಲೆಯಲ್ಲಿ ಅಚ್ಚುಕಟ್ಟಾಗಿದ್ದ ಬಾರ್‌ಗೆ ಹೋದರು. ಕ್ಯಾಬಿನೆಟ್‌ನಿಂದ ಒಂದು ವ್ಹಿಸ್ಕಿ ಬಾಟಲಿಯನ್ನು ತೆಗೆದುಕೊಂಡು ನನ್ನನ್ನು ನೋಡುತ್ತಾ ಹೇಳಿದರು, 'ಇದು 1992ರಲ್ಲಿ ತಯಾರಾದದ್ದು. ನಾನೊಂದು ಒಳ್ಳೆಯ ಅವಕಾಶಕ್ಕಾಗಿ ಕಾಯುತ್ತಿದ್ದೆ. ಇವತ್ತು ನಿಮ್ಮನ್ನು ಭೇಟಿಯಾಗಿ ತುಂಬಾ ಸಂತೋಷವಾಯಿತು' ಎಂದು ಡಾಕ್ಟರ್ ಶ್ರೀನಿವಾಸನ್ ಬಾಟಲಿಯ ಮುಚ್ಚಳವನ್ನು ತೆರೆದರು. ಬಿಳಿ ನೊರೆ ಬಾಟಲಿಯಿಂದ ಚಿಮ್ಮಿತು.

ಅವರು ಎರಡು ಗಾಜಿನ ಗ್ಲಾಸ್‌ಗಳಿಗೆ ವ್ಹಿಸ್ಕಿ ಬಗ್ಗಿಸಿ ಒಂದು ಪೆಗ್ ನನ್ನೆಡೆಗೆ ಚಾಚಿದರು.

'ಚಿಯರ್ಸ್!'

'ಐ ಯಾಮ್ ಸಾರಿ! ನಾನು ಆಲ್ಕೋಹಾಲ್ ಸೇವಿಸುವುದಿಲ್ಲ' ಎಂದೆ.

'ನೀವು ಕುಡಿಯಲ್ವಾ?' ರಾಮಚಂದ್ರರಿಗೆ ತುಂಬಾ ಆಶ್ಚರ್ಯವಾಯಿತು, 'ಮದ್ಯ ಜಗತ್ತಿನಲ್ಲಿ ಅತಿ ವ್ಯಾಪಕವಾದ ಮತ್ತು ಜನಪ್ರಿಯವಾದ ಪಾನೀಯವಾಗಿದೆ. ಬೇಟೆಗಾರರಿಂದ ಹಿಡಿದು ಅಧಿಕಾರದಲ್ಲಿರುವವರು ಇದನ್ನು ಸೇವಿಸುತ್ತಾರೆ. ಜಗತ್ತಿನ ಎಲ್ಲಾ ಸಂಸ್ಕೃತಿಗಳಲ್ಲಿ ಇದರ ಉತ್ಪಾದನೆ ಮತ್ತು ಮಾರಾಟವಿದೆ. ನೀರು ಮತ್ತು ಚಹಾದ ನಂತರ ಮದ್ಯಕ್ಕೆ ಮಹತ್ವದ ಸ್ಥಾನವಿದೆ. ಅಲ್ಲದೆ ಸ್ಕಾಟ್ಸ್ ಮದ್ಯಕ್ಕೆ ಪ್ರಸಿದ್ಧಿಯಾಗಿದೆ. ನೀವೆಂಥ ಸ್ಕಾಟ್ಸ್‌ಮೆನ್?'

'ಅಪ್ಪಾ, ಸುಮ್ನಿರಿ...' ನೀನಾ ತನ್ನ ತಂದೆಯನ್ನು ತಡೆದಳು.